# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 232 (2181) |
| **ಸದಸ್ಯರ ಹೆಸರು** | : | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸ ಬೇಕಾದ ದಿನಾಂಕ** | : | 26.03.2026 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಕೋಟೆ ಮತ್ತು ಜೋಗಿಮಟ್ಟಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಅನುದಾನ ನೀಡಿದೆ;</td><td rowspan="2">ಚಿತ್ರದುರ್ಗ ಜಿಲ್ಲೆಯ ಕೋಟೆ ಮತ್ತು ಜೋಗಿಮಟ್ಟಿ ಪ್ರವಾಸಿ ತಾಣಗಳು ಭಾರತೀಯ ಪುರಾತತ್ವ ಸಂರಕ್ಷಣಾ ಇಲಾಖೆಯ (ASI) ವ್ಯಾಪ್ತಿಗೆ ಒಳಪಟ್ಟಿರುತ್ತದೆ.<br><br>ಚಿತ್ರದುರ್ಗ ಜಿಲ್ಲೆಯ ಕೋಟೆ ಮತ್ತು ಜೋಗಿಮಟ್ಟಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಕಳೆದ ಎರಡು ವರ್ಷಗಳಿಂದ ಯಾವುದೇ ಕಾಮಗಾರಿಗಳು ಮಂಜೂರಾಗಿಲ್ಲದ ಕಾರಣ ಅನುದಾನ ಬಿಡುಗಡೆ ಮಾಡಿರುವುದಿಲ್ಲ.<br><br>ಪ್ರಸ್ತುತ, ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದ ಅಡಿಯಲ್ಲಿ ಗಣಿಗಾರಿಕೆ ಪ್ರಭಾವಕ್ಕೆ ಒಳಗಾದ ಪ್ರದೇಶಗಳನ್ನು ಪುನಃಶ್ಚೇತನಗೊಳಿಸಲು CEPMIZ ಯೋಜನೆಯಡಿ ಪ್ರವಾಸೋದ್ಯಮ ಇಲಾಖೆಗೆ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಚಿತ್ರದುರ್ಗ ಕೋಟೆ ಮತ್ತು ಚಂದ್ರವಳ್ಳಿ ಪ್ರವಾಸಿ ತಾಣಗಳ ಅಭಿವೃದ್ಧಿಗೆ ರೂ.28.40 ಕೋಟಿ ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದ್ದು, ಅಂದಾಜು ಪಟ್ಟಿ (ಡಿ.ಪಿ.ಆರ್) ಯನ್ನು ತಯಾರಿಸುವುದು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಟೆಂಡರ್ ಕರೆದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.<br><br>ಈ ಪೈಕಿ ಚಿತ್ರದುರ್ಗ ಕೋಟೆಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಒಟ್ಟು ರೂ.13.75 ಕೋಟಿ ಮೊತ್ತದಲ್ಲಿ ಈ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಲಾಗಿದೆ.<br><br><table><tr><th>ಪ್ರವಾಸಿ ತಾಣ</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ</th></tr><tr><td>ಚಿತ್ರದುರ್ಗ ಕೋಟೆ</td><td>Inside Fort:<br>Sound & Light Illumination: 4 nos</td><td>Rs.11.50 ಕೋಟಿ</td></tr></table></td></tr>
<tr><td>ಆ)</td><td>ಕೋಟೆ ಮತ್ತು ಜೋಗಿಮಟ್ಟಿ ಪ್ರವಾಸಿ ತಾಣವನ್ನು ಅಭಿವೃದ್ಧಿಪಡಿಸಲು ಯಾವ ಯಾವ ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ;</td></tr>
</table>

| | | |
|---|---|---|
| | **In-front of Fort:** New Pathway from Hanumana Dorr (onake Obavva Kindi) to Chandravalli park approx, 1.5 KM Length & 3.00 M Width with Electric Buggy : 4 Nos | Rs.2.25 ಕೋಟಿ |
| | **ಒಟ್ಟು** | **Rs.13.75 ಕೋಟಿ** |

| | | |
|---|---|---|
| ಇ) | ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಗೆ ಒಳಪಡುವ ದೇವಾಲಯಗಳು ಎಷ್ಟು; ತಾಲ್ಲೂಕುವಾರು ವಿವರ ನೀಡುವುದು; | ರಾಜ್ಯದ ಯಾವುದೇ ದೇವಾಲಯಗಳು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ. |
| ಈ) | ಈ ಎಲ್ಲಾ ತಾಣಗಳಿಗೆ ಸರ್ಕಾರ ಯಾವ ಯೋಜನೆಗಳನ್ನು ಕೈಗೊಂಡಿದೆ; ಎಷ್ಟು ಅನುದಾನವನ್ನು ನೀಡಿದೆ? | ಕರ್ನಾಟಕ ಪ್ರವಾಸೋದ್ಯಮ ನೀತಿ 2024-2029 ರಡಿ ಚಿತ್ರದುರ್ಗ ಜಿಲ್ಲೆಯಲ್ಲಿ ದೇವಾಲಯಗಳನ್ನು ಒಳಗೊಂಡಂತೆ 39 ಪ್ರವಾಸಿ ತಾಣಗಳನ್ನು ಗುರುತಿಸಲಾಗಿರುತ್ತದೆ. ವಿವರವನ್ನು **<u>ಅನುಬಂಧ</u>**ದಲ್ಲಿ ಒದಗಿಸಿದೆ.<br><br>ಸದರಿ ಪ್ರವಾಸಿ ತಾಣಗಳನ್ನು ಪರಿಶೀಲಿಸಿ ನೂತನ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತುತ 2026-27ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಲಭ್ಯತೆಗನುಗುಣವಾಗಿ ಹಾಗೂ ಪ್ರವಾಸಿ ಸೌಕರ್ಯಗಳ ಅಗತ್ಯತೆಗನುಗುಣವಾಗಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದು.<br><br>ಇದಲ್ಲದೇ, 2024-29 ಪ್ರವಾಸೋದ್ಯಮ ನೀತಿಯಡಿ 25 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಸದರಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. |

**ಸಂಖ್ಯೆ:ಟಿಒಆರ್ 127 ಟಿಡಿವಿ 2026**

**(ಎಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್ ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿಯತರಾದವರು)ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2181ಕ್ಕೆ ಅನುಬಂಧ**

| ತಾಲ್ಲೂಕಿನ ಹೆಸರು | ಕ್ರ.ಸಂ. | ಪ್ರವಾಸಿ ತಾಣದ ಹೆಸರು | ಪ್ರವಾಸಿ ತಾಣಗಳ ಸಂಖ್ಯೆ |
|---|---|---|---|
| ಚಿತ್ರದುರ್ಗ | 1 | ಚಿತ್ರದುರ್ಗ ಕೋಟೆ | 7 |
| | 2 | ಚಂದ್ರವಳ್ಳಿ | |
| | 3 | ಆಡು ಮಲ್ಲೇಶ್ವರ | |
| | 4 | ಜೋಗಿಮಟ್ಟಿ | |
| | 5 | ಶ್ರೀ ನಿಜಲಿಂಗಪ್ಪ ಸ್ಮಾರಕ ಕೇಂದ್ರ ಸೀಬಾರ | |
| | 6 | ಪಂಡರಹಳ್ಳಿ | |
| | 7 | ತಮಟಗಲ್ಲು | |
| ಹಾಲು ರಾಮೇಶ್ವರ | 8 | ಹಾಲುರಾಮೇಶ್ವರ ದೇವಸ್ಥಾನ | 9 |
| | 9 | ಜಾಮಕಲ್ | |
| | 10 | ಬೆಲಗೂರು | |
| | 11 | ಹೆಗ್ಗೆರೆ | |
| | 12 | ದಶರಥರಾಮೇಶ್ವರ(ವಜ್ರ) | |
| | 13 | ಹೊಸದುರ್ಗ ಕೋಟೆ | |
| | 14 | ಗವಿ ರಂಗನಾಥ ಸ್ವಾಮಿ ಬೆಟ್ಟ | |
| | 15 | ಚೆನ್ನಕೇಶವ ದೇವಾಲಯ, ಬಾಗೂರು ಗ್ರಾಮ | |
| | 16 | ನೀರಗುಂದ ಶ್ರೀ ಸಿದ್ದೇಶ್ವರ ದೇವಾಲಯ | |
| ಚಳ್ಳಕೆರೆ | 17 | ನಾಯಕನ ಹಟ್ಟಿ ಶ್ರೀ ಗುರುತಿಪ್ಪೇರುದ್ರಸ್ವಾಮಿ ದೇವಸ್ಥಾನ | 3 |
| | 18 | ರಾಮದುರ್ಗ/ಹೊಸಗುಡ್ಡ | |
| | 19 | ಗೌರಸಮುದ್ರ ಮಾರಮ್ಮ ದೇವಸ್ಥಾನ | |
| ಹೊಳಲ್ಕೆರೆ | 20 | ರಾಮಗಿರಿ | 6 |
| | 21 | ದೊಡ್ಡಹೊಟ್ಟೆ ರಂಗಪ್ಪನ ಬೆಟ್ಟ | |
| | 22 | ಹೊಳಲ್ಕೆರೆ( ಪ್ರಸನ್ನಗಣಪತಿ) | |
| | 23 | ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ದೇವಸ್ಥಾನ ಹೊರಕೆದೇವಪುರ | |
| | 24 | ಶ್ರೀ ರಾಮೇಶ್ವರ ದೇವಾಲಯ ಗಂಗಸಮುದ್ರ | |
| | 25 | ಭರಮಣ್ಣ ನಾಯಕ ದುರ್ಗ( ಬಿ.ದುರ್ಗ) | |
| ಹಿರಿಯೂರು | 26 | ವಾಣಿ ವಿಲಾಸ ಸಾಗರ( ಮಾರಿ ಕಣಿವೆ) | 6 |
| | 27 | ಗಾಯಿತ್ರಿ ಜಲಾಶಯ | |
| | 28 | ತೇರುಮಲ್ಲೇಶ್ವರ ದೇವಸ್ಥಾನ | |
| | 29 | ವದ್ದೀಕೆರೆ ಸಿದ್ದೇಶ್ವರ | |
| | 30 | ಅಂಬಲಗೆರೆ ರಂಗನಾಥಸ್ವಾಮಿ ದೇವಸ್ಥಾನ | |
| | 31 | ಮರಡಿಹಳ್ಳಿ ಪಿಲ್ಲೋ ಲಾವಾ | |
| ಮೊಳ ಕಾಲ್ಮೂರು | 32 | ಮೊಳಕಾಲ್ಮೂರು ಗುಡ್ಡ | 8 |
| | 33 | ಸಂತೇಗುಡ್ಡ | |
| | 34 | ರಂಗಯ್ಯನ ದುರ್ಗ ಜಲಾಶಯ | |
| | 35 | ನುಂಕಿಮಲೆ ಅಥವಾ ದೇವರಗುಡ್ಡ | |
| | 36 | ಬ್ರಹ್ಮಗಿರಿ/ ಅಶೋಕ ಸಿದ್ದಾಪುರ | |
| | 37 | ಜಟಿಂಗ ರಾಮೇಶ್ವರ | |
| | 38 | ಬಿಳಿನೀರು ಚಿಲುಮೆ ಕೊಂಡ್ಲಹಳ್ಳಿ | |
| | 39 | ತ್ರಿಶಂಕೇಶ್ವರ ದೇವಾಲಯ, ಬ್ರಹ್ಮಗಿರಿ ಬೆಟ್ಟ | |
| | | **ಚಿತ್ರದುರ್ಗ ಜಿಲ್ಲೆ ಒಟ್ಟು** | **39** |